ಮಂಜೂರು ಮಾಡಿರುವುದಿಲ್ಲ

ಆ) ಹಾಗಿದ್ದಲ್ಲಿ, ಈ ಒಳಚರಂಡಿ ಕಾಮಗಾರಿಗಳಿಗೆ ಎಷ್ಟು ಹಣ ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ,

ಹಣ ಬಿಡುಗಡೆಯಾಗಿಲ್ಲ

ಇ) ಹಣ ಮಂಜೂರಾಗಿದ್ದರೂ ಈ ಕಾಮಗಾರಿಯನ್ನು ಪ್ರಾರಂಭಿಸಲು ವಿಳಂಬ ಮಾಡುತ್ತಿರುವುದಕ್ಕೆ ಕಾರಣಗಳೇನು?

ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1188(1583)**
ಮಾನ್ಯ ಸದಸ್ಯರ ಹೆಸರು **ಶ್ರೀ ಕೃಷ್ಣಪ್ಪ ಎಂ ಟಿ (ತುರುವೇಕೆರೆ)**
ಉತ್ತರಿಸುವ ಸಚಿವರು **ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)**

ಅ) ಶಿಂಷಾ ನದಿಗೆ ಅಡ್ಡಲಾಗಿ ಮನೆ ಚೆಂಡೂರು ಹಾಗೂ ಮುತ್ತಂದ್ರಗಳ ಸಮೀಪ ಎರಡು ಪಿಕಪ್‌ಗಳನ್ನು ನಿರ್ಮಿಸುವ ಕೆಲಸ ಇನ್ನೂ ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಹೌದು

ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೋಂಡಿರುವ ಕ್ರಮಗಳೇನು,

ಮಣಿಚೆಂಡೂರು ಹಾಗೂ ಮುತ್ತ್ಸಂದ್ರ ಗ್ರಾಮಗಳ ಸಮೀಪ ಪಿಕಪ್‌ಗಳನ್ನು ನಿರ್ಮಿಸಲು ಅಂದಾಜುಗಳನ್ನು ಕ್ರಮವಾಗಿ ರೂ 76 85 ಲಕ್ಷ ಹಾಗೂ ರೂ 99 10 ಲಕ್ಷಗಳಿಗೆ ತಯಾರಿಸಲಾಗಿದೆ

ಇ) ಯಾವಾಗ ಈ ಕೆಲಸವನ್ನು ಪ್ರಾರಂಭಿಸಲಾಗುವುದು?

ಈ ಕಾಮಗಾರಿಗಳನ್ನು ತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1189(1584)**
ಮಾನ್ಯ ಸದಸ್ಯರ ಹೆಸರು **ಶ್ರೀ ಕೃಷ್ಣಪ್ಪ ಎಂ ಟಿ (ತುರುವೇಕೆರೆ)**
ಉತ್ತರಿಸುವ ಸಚಿವರು **ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)**

ಅ) ಗ್ರಾಮೀಣ ನೀರು ಸರಬರಾಜು ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಕಳೆದ 3 ವರ್ಷಗಳಿಂದ ನೀಡಿದ ಮತ್ತು ಖರ್ಚು ಮಾಡಿದ ಹಣವೆಷ್ಟು (ವೆಚ್ಚವಾರು ವಿವರ ನೀಡುವುದು),